


ರಾಜಸ್ಥಾನದ ಕರಣಿಮಾತೆಯ ಮಂದಿರದಲ್ಲಿ ಇಲಿಗಳು ಸಾವಿರಾರು ಸಂಖ್ಯೆಯಲ್ಲಿವೆ. ಮಾತೆಯ ಜೊತೆಗೆ ಆಕೆಯ ಮಕ್ಕಳ ರೂಪವಾದ ಮೂಷಿಕಗಳಿಗೂ ಭಕ್ತಿ ಸಲ್ಲುತ್ತದೆ. ದೇಗುಲದಲ್ಲಿನ ಇಲಿಗಳಿಗೆ ಭಕ್ತರಿಂದ ಹಾಲು–ಲಾಡುವಿನ ನೈವೇದ್ಯ.

**■ ನರೇಂದ್ರ ಎಸ್. ಗಂಗೊಳ್ಳಿ**



ಇಲಿಗಳನ್ನು ಕಂಡರೆ ಗಾಬರಿಬೀಳುವವರೇ ಹೆಚ್ಚು. ಇಲಿಗಳ ಕಾಟ ಹೆಚ್ಚಾದಾಗ ಅವುಗಳನ್ನು ವಿಷವಿಟ್ಟು ಕೊಲ್ಲಲಾಗುತ್ತದೆ, ಬೋನಿಟ್ಟು ಬೇಟೆಯಾಡಲಾಗುತ್ತದೆ. ಆದರೆ, ರಾಜಸ್ಥಾನದಲ್ಲಿ ಇಲಿಗಳಿಗಾಗಿ ಒಂದು ಮಂದಿರವೇ ಇದೆ. ಈ ಮೂಷಿಕ ಮಂದಿರ ಇರುವುದು ಬಿಕನೇರ್‌ನಿಂದ 30 ಕಿ.ಮೀ. ದೂರದಲ್ಲಿರುವ ದೇಶ್ನೋಕ್ ಎನ್ನುವ ಪ್ರದೇಶದಲ್ಲಿ.

ಇಲಿಗಳ ಮಂದಿರವನ್ನು 'ಕರಣಿಮಾತಾ ಮಂದಿರ' ಎಂದು ಕರೆಯಲಾಗುತ್ತದೆ. 14–15ನೇ ಶತಮಾನದಲ್ಲಿ ಜನಿಸಿದ್ದಳು ಎನ್ನಲಾದ ಕರಣಿಮಾತಾ ಎನ್ನುವ ಸನ್ಯಾಸಿನಿಯ ಹೆಸರಿನಲ್ಲಿ ಈ ಶ್ರದ್ಧಾಕೇಂದ್ರ ರೂಪುಗೊಂಡಿದೆ. ಈ ಸನ್ಯಾಸಿನಿ ದುರ್ಗಾ ಮಾತೆಯ ಅಪರಾವತಾರ ಎನ್ನುವ ಭಕ್ತರ ನಂಬಿಕೆ.

ಮಾತೆಯ ಪಾದುಕೆಗಳ ಆಕೃತಿಯನ್ನು ಮಂದಿರದಲ್ಲಿ ಪೂಜಿಸಲಾಗುತ್ತದೆ. ಇದೇ ಮಾತೆಯ ಆರಾಧನೆ ನಡೆಯುವ ಮತ್ತೊಂದು ಮಂದಿರ ಉದಯ್‌ಪುರದ ಮಚ್ಲಾ ಬೆಟ್ಟದಲ್ಲಿದೆ. ಈ ದೇಗುಲದ ಆಕರ್ಷಣೆ ಇರುವುದು ಇಲ್ಲಿರುವ ಸಹಸ್ರಾರು ಇಲಿಗಳಲ್ಲಿ. ಮನುಷ್ಯಮಾತ್ರರ ಬಗ್ಗೆ ಕಿಂಚಿತ್ತೂ ಭಯವಿಲ್ಲದೆ ಇಲಿಗಳು ದೇಗುಲದಲ್ಲಿ ಓಡಾಡಿಕೊಂಡಿವೆ. ಸುಮಾರು 20 ಸಾವಿರ ಇಲಿಗಳು ಇಲ್ಲಿವೆ ಎನ್ನುವುದು ಒಂದು ಅಂದಾಜು.

ಇಲಿಗಳಿಗೆ ರಾಜಮರ್ಯಾದೆ ದೊರೆಯುವ ಈ ಮಂದಿರದಲ್ಲಿ ವಿರಳವಾದ ಬಿಳಿ ಇಲಿಗಳೂ ಕಾಣಸಿಗುತ್ತವೆ. ಅವುಗಳಿಗಂತೂ ಇನ್ನಷ್ಟು ಮರ್ಯಾದೆ. ಈ ಬಿಳಿ ಇಲಿಗಳನ್ನು ಹುಡುಕಿಕೊಂಡು ದೇಗುಲದ ಮೂಲೆ ಮೂಲೆ ಎಡತಾಕುವ ಭಕ್ತರೂ ಇದ್ದಾರೆ. ಈ ಇಲಿಗಳು ಕರಣಿಮಾತೆಯ ಮಕ್ಕಳು ಎನ್ನುವುದು ಭಕ್ತರ ಮತ್ತೊಂದು ನಂಬಿಕೆ.

ಭಕ್ತಿ ಹೊಟ್ಟೆ ತುಂಬಿಸುವುದಿಲ್ಲವಷ್ಟೇ! ಇಲಿಗಳ ನೈವೇದ್ಯಕ್ಕೆಂದು ಭಕ್ತರು ಹಾಲು ಮತ್ತು ಲಾಡಿನ ಉಂಡೆಗಳನ್ನು ತರುತ್ತಾರೆ. ಹಿಂಡುಹಿಂಡಾಗಿ ಹಾಲು ಇರುವ ಇಲಿಗಳನ್ನು ನೋಡುವುದು ಒಂದು ಅಪರೂಪದ ದೃಶ್ಯ. ನವರಾತ್ರಿ ಸಂದರ್ಭದಲ್ಲಂತೂ ಮೂಷಿಕಗಳಿಗೆ ವಿಶೇಷ ಭೋಜನ.

ಸ್ಥಳೀಯವಾಗಿ ಇಲ್ಲಿನ ಇಲಿಗಳನ್ನು 'ಕಬ್ಬಾ' ಎಂದು ಕರೆಯಲಾಗುತ್ತದೆ. ಇಷ್ಟೊಂದು ಸಂಖ್ಯೆಯ ಇಲಿಗಳು ಓಡಾಡಿಕೊಂಡಿರುವಾಗ ಯಾವುದಾದರೂ ಇಲಿ ಭಕ್ತರ ಕಾಲಿಗೆ ಸಿಲುಕುವುದಿಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ನಿಜ ಕೆಲವೊಮ್ಮೆ ಅನಾಹುತ ಸಂಭವಿಸುವುದೂ ಇದೆ. ಒಂದು ವೇಳೆ, ಯಾರಿಂದಲಾದರೂ ಇಲಿ ಸಾವಿಗೀಡಾದರೆ, ಅವರು ತಪ್ಪುಕಾಣಿಕೆಯಾಗಿ ಚಿನ್ನದ ಇಲಿಯನ್ನು ದೇಗುಲಕ್ಕೆ ನೀಡುತ್ತಾರೆ.

ಇಷ್ಟೊಂದು ಇಲಿಗಳು ಮಂದಿರದಲ್ಲಿದ್ದರೂ ಆ ಪ್ರದೇಶದಲ್ಲಿ ಒಮ್ಮೆಯೂ ಪ್ಲೇಗ್ ಕಾಯಿಲೆ ಕಾಣಿಸಿಕೊಂಡಿಲ್ಲ. ಪ್ಲೇಗಮ್ಮ ಕಾಣಿಸಿಕೊಳ್ಳದಿರುವುದಕ್ಕೆ ಕರಣಿಯಮ್ಮನ ಕರುಣೆ–ಪವಾಡವೇ ಕಾರಣವಂತೆ.

ಇಲಿಗಳೊಂದಿಗೆ ಕರಣಿಮಾತೆಯ ಸಂಬಂಧದ ಹಿನ್ನೆಲೆಯಲ್ಲಿ ಒಂದು ಕಥೆಯಿದೆ. ಈ ಮಾತೆ ಜನಿಸಿದ್ದು ರಾಜಕುಟುಂಬದಲ್ಲಿ. ಗಂಡನೊಂದಿಗೆ ಸ್ವಲ್ಪಕಾಲದ ದಾಂಪತ್ಯದ ನಂತರ ಮಾತೆಗೆ ಸಂಸಾರದಲ್ಲಿ ಸುಖವಿಲ್ಲವೆನ್ನಿಸಿತು. ವಿರಾಗಿಣಿಯಾದ ಆಕೆ ತನ್ನ ತಂಗಿಯನ್ನು ರಾಜನಿಗೆ ಮದುವೆ ಮಾಡಿಕೊಟ್ಟು, ತಾನು ಭಕ್ತಿಯ ಮಾರ್ಗ ಹಿಡಿದಳು. ಒಮ್ಮೆ ಈಕೆಯ ಮಲಮಗ ಲಕ್ಷ್ಮಣ ಸರೋವರದಲ್ಲಿ ಕಾಲು ಜಾರಿ ಸಾವಿಗೀಡಾಗುತ್ತಾನೆ. ಆಗ ಕರಣಿಮಾತೆ ಯಮನನ್ನು ಪೂಜಿಸಿ ತನ್ನ ಪುತ್ರನಿಗೆ ಪ್ರಾಣದಾನ ನೀಡುವಂತೆ ಕೋರುತ್ತಾರೆ. ಯಮ ಲಕ್ಷ್ಮಣನಿಗೆ ಇಲಿಯ ರೂಪದಲ್ಲಿ ಮರುಜನ್ಮ ನೀಡಿದನಂತೆ. ಅದಾದ ನಂತರ ಇಂದಿನವರೆಗೂ ಕರಣಿಮಾತೆಯ ವಂಶಸ್ಥರು ಮೊದಲು ಇಲಿಯ ರೂಪ ತಳೆದು ನಂತರ ಮಾನವರಾಗಿ ಜನ್ಮ ತಾಳುತ್ತಾರೆ ಎನ್ನುವುದು ಕಥೆ. ಶತ್ರುಗಳ ದಾಳಿಯಿಂದ ತಪ್ಪಿಸಿಕೊಂಡು ತನ್ನ ಆಶ್ರಯಕ್ಕೆ ಬಂದವರಿಗೆ ಮಾತೆ ಇಲಿಗಳ ರೂಪ ನೀಡಿದಳು ಎನ್ನುವುದು ಇನ್ನೊಂದು ಕಥೆ.

ದೇಶದ ವಿವಿಧ ಭಾಗಗಳಿಂದ ಕರಣಿಮಾತಾ ಮಂದಿರಕ್ಕೆ ಪ್ರವಾಸಿಗರು ಭೇಟಿ ನೀಡುತ್ತಾರೆ. ವಿದೇಶಿ ಪ್ರವಾಸಿಗರೂ ಬರುವುದಿಲ್ಲ. ಎಲ್ಲರ ಆಕರ್ಷಣೆಯ ಕೇಂದ್ರ – ಇಲಿಗಳ ಸಾಮ್ರಾಜ್ಯ. ಈ ಮಂದಿರವನ್ನು 'ಬೊಮ್ಮನಹಳ್ಳಿಯ ಕಿಂದರಜೋಗಿ' ಬರೆದ ಕುವೆಂಪು ಅವರೇನಾದರೂ ನೋಡಿದ್ದರೆ, 'ಅಲ್ಲೇನಿಲಿಗಳ ಆಟವೇ ಆಟ' ಎಂದು ಮತ್ತೊಂದು ಕವಿತೆ ಬರೆಯುತ್ತಿದ್ದರೇನೊ? ■